Construction of Bridge near Hole-Alur.

*Q.—650. **Sri A. J. DODDAMETI** (Rone).—

Will the Government be pleased to state :—

(*a*) whether it is fact that the Minister for Public Works during his visit to Hole-Alur village in Ron Taluk, Dharwar District, on 22nd June 1959, assured the villagers, that the work of constructing a bridge for Mala prabha River near Hole-Alur and the supply of Electricity to the said village, would be taken up early ;

(*b*) If so the action taken by Government thereon ?

A.—**Sri H. M. CHANNABASAPPA** (Minister for Public Works and Electricity).—

(*a*) Yes, so far as only the bridge is concerned.

(*b*) As regards the bridge, survey work is in progress. Supply of electricity to Hole-Alur will be considered after the power line is extended to Ron.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಸೇತುವೆಯ ಸರ್ವೆ ಕೆಲಸ ಯಾವಾಗ ಮುಗಿಯುತ್ತದೆ ?

† ಶ್ರೀ ಎಂ ಎಚ್. ನಾಗನೂರ್.—ಸರ್ವೆ ಕೆಲಸ ಬಹಳ ಜೋರಾಗಿ ನಡೆಯುತ್ತಿದೆ, ಬೇಗನೆ ಮುಗಿಯುತ್ತದೆ.

ಶ್ರೀ ಬಿ. ಕೆ. ನಾಗೂರ್.—(*a*) ಪ್ರಶ್ನೆಗೆ ಉತ್ತರವಾಗಿ "ಹೌದು, ಸೇತುವೆಯ ಸಂಬಂಧವಾಗಿ ಮಾತ್ರ ಭರವಸೆ ಕೊಡಲಾಗಿತ್ತು" ಎಂದು ಹೇಳಿದೆ. ಈಗ ಆ ಕಾರ್ಯ ನಡೆಯುತ್ತಿದೆಯೆ ?

ಶ್ರೀ ಎಂ. ಎಚ್. ನಾಗನೂರ್.—ಆ ಭರವಸೆ ಕೊಟ್ಟಿದ್ದರ ಮೇರೆಗೆ ಸರ್ವೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಸೇತುವೆ ಸಲುವಾಗಿ ಬಡ್ಜೆಟ್ಟಿನಲ್ಲಿ 10 ಸಾವಿರ ರೂಪಾಯಿಗಳ ಗ್ರ್ಯಾಂಟು ಹಾಕಿದ್ದು ಈ ವರ್ಷದಲ್ಲಿಯೇ ಖರ್ಚಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—10 ಸಾವಿರ ರೂಪಾಯಿಗಳೂ ಖರ್ಚಾಗಬಹುದು. ಅಥವಾ ಅದಕ್ಕಿಂತ ಹೆಚ್ಚಾಗಿಯೂ ಖರ್ಚಾಗಬಹುದು. ಅದನ್ನು ನೋಡೋಣ.

ಶ್ರೀ ಎ. ಜೆ. ದೊಡ್ಡಮೇಟಿ.—ರೋಣಕ್ಕೆ ವಿದ್ಯುಚ್ಛಕ್ತಿ ಒಯ್ಯಬೇಕೆಂದು ಅಲ್ಲಿಗೆ ಮೆಟೀರಿಯರ್ಸ್ ಬಂದಿರೆ ಎಂಬುದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇಕಾದಷ್ಟು ಮೆಟೀರಿಯರ್ಸ್ ಅನ್ನು ಅಲ್ಲಿಗೆ ಕೂಡಿಸಿ ಇಡಲಾಗಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಕೆಲಸ ಯಾವಾಗ ಪ್ರಾರಂಭವಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಷ್ಟು ಬೇಗನೆ. ಪ್ರಾರಂಭ ಮಾಡುತ್ತೇವೆ.

ಶ್ರೀ ಟಿ.ಕೆ. ಕಂಬಳಿ.—ಮಲಪ್ರಭಾ ನದಿಗೆ ಸೇತುವೆ ಕಟ್ಟುವಕೆಲಸ 1960-61ರಲ್ಲಿ ಮುಗಿಯುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್ನೂ ಅಂದಾಜು ತಯಾರಾಗುತ್ತಿದೆ. ನಿರ್ದಿಷ್ಟ ಪಾಗಿ ಇಷ್ಟೇಕಾಲದಲ್ಲಿ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಕೆ. ನಾಗೂರ್.—ವಿದ್ಯುಚ್ಛಕ್ತಿ ಸರಬರಾಯಿ ವಿಷಯವನ್ನು ಪರಿಶೀಲಿಸಲಾಗುವುದು, ವಿಚಾರ ಮಾಡಲಾಗುವುದು, ಅದು ವಿಚಾರ ವಿನಿಮಯದಲ್ಲಿದೆ, ಈ ಪ್ರಶ್ನೆ ಉದ್ಭವಿಸುವುದಿಲ್ಲ, ಎಂದು ಹೇಳತಕ್ಕ ಶಬ್ದಗಳಿಗೆ ಸ್ವಲ್ಪ ವಿಶ್ರಾಂತಿ ಕೊಡುತ್ತೀರಾ ?

ಅಧ್ಯಕ್ಷರು.—ನೀವು ಮಂತ್ರಿಗಳಾಗಿ ಬಂದಾಗ ಆವುಗಳಿಗೆ ವಿಶ್ರಾಂತಿ ಕೊಡಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್ನೂ ರೋಣಕ್ಕೆ ಕೂಡ ವಿದ್ಯುಚ್ಛಕ್ತಿ ಸಪ್ಲೈ ಆಗಿಲ್ಲ. ಅದು ಮುಗಿದ ನಂತರ ಬೇರೆ ವಿಷಯವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಎಸ್. ಪಟಣ್.—ರಾಮದುರ್ಗಕ್ಕೆ ವಿದ್ಯುಚ್ಛಕ್ತಿಯನ್ನು ಯಾವಾಗ ಕೊಡುತ್ತೀರಿ ?

ಅಧ್ಯಕ್ಷರು.—ಆ ಪ್ರಶ್ನೆಗೆ ಈಗ ಬರುವುದಿಲ್ಲ.

Supply of drinking water to Bagepalli.

*Q.—654. **Sri S. MUNIRAJU** (Chickballapur).—

Will the Government be pleased to state :—

(*a*) when the Government accorded sanction to the estimate for supplying drinking water to Bagepally ;

(*b*) when the tender was called for constructing a well provided in this estimate ;

(*c*) the stage at which this estimate is pending ?

A.—**Sri T. SUBRAMANYA** (Minister for Law, Labour and Local Self-Government).—

(*a*) The revised estimate was sanctioned by Government in December, 1957.

(*b*) Fresh tenders for the construction of the well were called for during November, 1958.

(*c*) The tender has been sanctioned recently.

Sri S. MUNIRAJU.—May I know whether there is any time-limit for disposing of the tender ?

† **Sri T. SUBRAMANYA.**—As early as possible.